ಸ್ಥಳ : ಪ್ರೆಸ್ ಕ್ಲಬ್, ಬೆಂಗಳೂರು                                        ದಿನಾಂಕ : 4 ಏಪ್ರಿಲ್ 2013

# ಮಾಧ್ಯಮಗಳಿಗೆ ಮಾಹಿತಿ : ಕರ್ನಾಟಕ ಚುನಾವಣಾ ಕಾವಲು (KEW)

ನಮ್ಮ ಮುಂದಿರುವ ವಿಧಾನ ಸಭಾ ಚುನಾವಣೆ ಸ್ವಚ್ಛವಾಗಿ ನಡೆಯಬೇಕು ಅದರಿಂದಾಗಿ ನಮಗೆ ಉತ್ತಮ ಆಡಳಿತ ಸಿಗುತ್ತದೆ ಎಂದು ಆಶಿಸಿ ಅದಕ್ಕಾಗಿ ಕರ್ನಾಟಕ ಚುನಾವಣಾ ಕಾವಲು ಸರಣಿ ಚಟುವಟಿಕೆಗಳನ್ನು ನಡೆಸಲು ಯೋಜಿಸುತ್ತಿದೆ. ಕರ್ನಾಟಕ ಚುನಾವಣಾ ಕಾವಲು ರಾಜಕೀಯೇತರ, ಪಕ್ಷೇತರ ವ್ಯಕ್ತಿಗಳು ಮತ್ತು ನಾಗರೀಕ ಸಂಸ್ಥೆಗಳ ಸಂಘಟನೆ/ಕೂಟವಾಗಿದೆ. ಕರ್ನಾಟಕದ ಬಹುತೇಕ ಜಿಲ್ಲೆಗಳ ಪ್ರತಿನಿಧಿಗಳು ಈ ಕೂಟದಲ್ಲಿದ್ದಾರೆ. ರಾಜ್ಯದ ಅನೇಕ ಪ್ರಮುಖರೂ ಪ್ರಸಿದ್ಧರೂ ಆದ ವ್ಯಕ್ತಿಗಳು ಕರ್ನಾಟಕ ಚುನಾವಣಾ ಕಾವಲಿಗೆ ಬೆಂಬಲ ಮತ್ತು ಮಾರ್ಗದರ್ಶನ ನೀಡುತ್ತಿದ್ದಾರೆ.

## ಪ್ರಮುಖ ಉದ್ದೇಶಗಳು:

1. ಚುನಾವಣೆಗಳಲ್ಲಿ ವಿಪರೀತ ಖರ್ಚು ಮಾಡುವುದು ಮತ್ತು ಮತದಾರರಿಗೆ ಹಣ, ಹೆಂಡ ಮತ್ತು ಉಡುಗೊರೆಗಳ ರೂಪದಲ್ಲಿ ಲಂಚ ಕೊಡುವುದನ್ನು ಎದುರಿಸಲು "ನನ್ನ ಮತ ಮಾರಾಟಕ್ಕಿಲ್ಲ" ಎಂಬ ಪ್ರಚಾರ ಅಭಿಯಾನ ಮಾಡುವುದು. ಈ ಪ್ರಚಾರ ಅಭಿಯಾನದಲ್ಲಿ ವಿವಿಧ ಜಿಲ್ಲೆಗಳಲ್ಲಿ ನಡೆಸಲಾಗುವ ಬೀದೀ ನಾಟಕಗಳು, ಕರಪತ್ರ ವಿತರಣೆ, ಎಸ್.ಎಂ.ಎಸ್. ಸಂದೇಶ ರವಾನೆ, ಚಲನಚಿತ್ರ ರಂಗದ ಪ್ರಸಿದ್ಧ ನಟರು ಈ ಮಾಹಿತಿ/ಸಂದೇಶ ನೀಡುವ ವಿಡಿಯೋ ಪ್ರದರ್ಶನ ಮತ್ತು ಮಾಧ್ಯಮಗಳು ನೀಡುವ ಸಹಾಯದಿಂದ ದೊಡ್ಡ ಸಂಖ್ಯೆಯ ಮತದಾರರನ್ನು ತಲುಪುವುದು.

2. ಎಲ್ಲ ಮತದಾರರು/ವಯಸ್ಕರು ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಮತ ಚಲಾಯಿಸಲೇಬೇಕೆಂದು ಕರ್ನಾಟಕ ಚುನಾವಣಾ ಕಾವಲು ಆಗ್ರಹಿಸುತ್ತದೆ. ಆದರೆ, ಮತ ಚಲಾಯಿಸುವ ಮೊದಲು ಮತದಾರರು, ಚುನಾವಣೆಯ ಕಣದಲ್ಲಿರುವ ಅಭ್ಯರ್ಥಿಗಳನ್ನು ಕುರಿತು ಮಾಹಿತಿ ಪಡೆದುಕೊಂಡು ಅದನ್ನು ಆಧರಿಸಿ ತಮ್ಮ ಆಯ್ಕೆಯನ್ನು ಮಾಡಿಕೊಳ್ಳಬೇಕು. ಹೀಗೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳನ್ನು ಕುರಿತು ಅವರ ಆಸ್ತಿ ವಿವರ ಮತ್ತು ಅವುಗಳ ಹೆಚ್ಚಳ; ಅವರ ಮೇಲೆ ಹೂಡಿರಬಹುದಾದ ಅಪರಾಧಿಕ ಮೊಕದ್ದಮ್ಮೆಗಳ ದಾಖಲೆಗಳು, ವಿಧಾನ ಸಭೆಯಲ್ಲಿ ಅವರ ಹಾಜರಾತಿ ಮತ್ತು ಸಭೆಯಲ್ಲಿ ಕೇಳಿರಬಹುದಾದ ಪ್ರಶ್ನೆಗಳು, ಇವೇ ಮೊದಲಾದವುಗಳನ್ನು ಒಳಗೊಂಡ ಮಾಹಿತಿಯನ್ನು ಕರ್ನಾಟಕ ಚುನಾವಣಾ ಕಾವಲು ಪ್ರಚುರಪಡಿಸುತ್ತದೆ.

ನಮ್ಮ ಶಾಸಕರು, ಕರ್ನಾಟಕದ ಆಯವ್ಯಯ, ರಾಜಕೀಯ ಪಕ್ಷಗಳ ಆದಾಯ/ದೇಣಿಗೆ ವಿವರ, ಅವುಗಳ ಆದಾಯ ತೆರಿಗೆ ಪಾವತಿ ವಿವರ, ಚುನಾವಣಾ ಸಮಯದಲ್ಲಿ ರಾಜಕೀಯ ಪಕ್ಷಗಳ ವೆಚ್ಚ ಇತ್ಯಾದಿ ವಿವರಗಳನ್ನು ಮುಂದಿನ ಕೆಲವು ವಾರಗಳಲ್ಲಿ ನಾವು ನಡೆಸುವ ಎರಡು ಮಾಧ್ಯಮ ಗೋಷ್ಠಿಗಳಲ್ಲಿ ಬಿಡುಗಡೆ ಮಾಡುತ್ತೇವೆ.

ಮಾಧ್ಯಮಗಳಿಗೆ ಬಿಡುಗಡೆ ಮಾಡಿರುವ ಈ ಮಾಹಿತಿಯಲ್ಲಿ ಈ ಮುಂದಿನ ವಿವರಗಳಿವೆ: ಕರ್ನಾಟಕದ ಈಗಿನ ಸಚಿವರ ವಿವರಗಳು; ಕಳೆದ ಕೆಲವು ವರ್ಷಗಳಲ್ಲಿ ಅವರ ಆಸ್ತಿ ಎಷ್ಟು ಹೆಚ್ಚಾಗಿದೆ; ಉಳಿದ ಶಾಸಕರಿಗೆ ಹೋಲಿಸಿದರೆ ಅದು ಹೇಗಿದೆ; ವಿವಿಧ ರಾಜಕೀಯ ಪಕ್ಷಗಳನ್ನು ಹೋಲಿಸಿದಾಗ ಹೇಗೆ ಕಾಣುತ್ತದೆ ಮತ್ತು ಕರ್ನಾಟಕದ ಶಾಸಕರನ್ನು ದಕ್ಷಿಣ ಭಾರತದ ರಾಜ್ಯಗಳ ಶಾಸಕರ ಆಸ್ತಿ ಪ್ರಮಾಣಕ್ಕೆ ಹೋಲಿಸುವ ವರದಿ.

## ಕರ್ನಾಟಕ ಮಂತ್ರಿ ಮಂಡಲದ ಸಚಿವರ ಮಾಹಿತಿ ವಿಶ್ಲೇಷಣೆ (2008–13)

## ಸಂಗ್ರಹ ಮಾಹಿತಿ

- ಕಳೆದ ಚುನಾವಣೆಯ ಸಮಯದಲ್ಲಿ ಭಾರತ ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದ ಕರ್ನಾಟಕ ಮಂತ್ರಿ ಮಂಡಲದ 27 ಸಚಿವರಲ್ಲಿ 24 ಮಂತ್ರಿಗಳ ಸ್ವಯಂಘೋಷಣಾ ಪ್ರಮಾಣ ಪತ್ರಗಳನ್ನು ರಾಷ್ಟ್ರೀಯ ಚುನಾವಣಾ ಕಾವಲು ವಿಶ್ಲೇಷಿಸಿದೆ. ಈ 24ರಲ್ಲಿ ಬಿಜೆಪಿಯ ವಿ. **ಸೋಮಣ್ಣನವರು** 2010ರಿಂದ ವಿಧಾನ ಪರಿಷತ್ತಿನ ಸದಸ್ಯರಾಗಿದ್ದಾರೆ. ಉಳಿದವರು ವಿಧಾನ ಸಭೆಯ ಸದಸ್ಯರು.

- ವಿಧಾನ ಸಭೆಗೆ 2008ರಲ್ಲಿ ನಡೆದ ಚುನಾವಣಾ ಸಂದರ್ಭದಲ್ಲಿ ನೀಡಿರುವ ಸ್ವಯಂಘೋಷಣಾ ಪ್ರಮಾಣಪತ್ರದಲ್ಲಿ ಉಲ್ಲೇಖಿಸಿರುವಂತೆ ಶೇ.42 ಸಚಿವರ ಮೇಲೆ (ವಿಶ್ಲೇಷಿಸಲಾದ 24ರಲ್ಲಿ 10) ಅಪರಾಧಿಕ ಮೊಕದ್ದಮ್ಮೆಗಳು ಇವೆ. 24ರಲ್ಲಿ ಇಬ್ಬರು ಸಚಿವರ ಮೇಲೆ ಭಾರತ ದಂಡ ಸಂಹಿತೆ (IPC)ಯಲ್ಲಿ ಉಲ್ಲೇಖಿಸಲಾಗಿರುವ ಕೊಲೆ, ಕೊಲೆ ಯತ್ನ, ಅಪಹರಣ, ಕಳ್ಳತನವೇ ಮೊದಲಾದ ಗುರುತರ ಆಪಾದನೆಗಳು ಇವೆ.

- ತಮ್ಮ ಮೇಲೆ ಅಪರಾಧಿಕ ಮೊಕದ್ದಮ್ಮೆಗಳಿವೆ ಎಂದು ಘೋಷಿಸಿಕೊಂಡಿರುವ ಈ ಹತ್ತು ಸಚಿವರಲ್ಲಿ ಈ ಮುಂದಿನ ಸಚಿವರು ತಮ್ಮ ಮೇಲೆ ತೀವ್ರತರವಾದ ಆಪಾದಮೆಗಳಿವೆ ಎಂದು ದಾಖಲಿಸಿದ್ದಾರೆ: 1) **ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ** (ಅರಭಾವಿಯ ಬಿಜೆಪಿ ಶಾಸಕರು) ತಮ್ಮ ಮೇಲೆ ಕೊಲೆ, ಕೊಲೆ ಯತ್ನ, ಅಪಹರಣ, ಕಳ್ಳತನ ಮೊದಲಾದವುಗಳನ್ನು ಕುರಿತು ಒಂದು ಪ್ರಕರಣವಿದೆ ಎಂದು ಘೋಷಿಸಿಕೊಂಡಿದ್ದಾರೆ; 2) **ಸಿ.ಟಿ. ರವಿ** (ಚಿಕ್ಕಮಗಳೂರಿನ ಬಿಜೆಪಿ ಶಾಸಕರು) ತಮ್ಮ ಮೇಲೆ ವಿವಿಧ ಗುಂಪುಗಳ ನಡುವೆ ಧರ್ಮ, ಜನಾಂಗ, ವಾಸಸ್ಥಳ, ಭಾಷೆ ಮೊದಲಾದವುಗಳನ್ನು ಕುರಿತು ದ್ವೇಷ ಉಂಟು ಮಾಡಿರುವ ಕುರಿತು ಪ್ರಕರಣ ಇದೆಯೆಂದು ಘೋಷಿಸಿಕೊಂಡಿದ್ದಾರೆ.

- ವಿಶ್ಲೇಷಿಸಲಾದ 24 ಸಚಿವರ ಆಸ್ತಿವಿವರದಂತೆ 18 ಸಚಿವರು ಅಥವಾ ಶೇ. 75 ಕೋಟ್ಯಾಧಿಪತಿಗಳು

- 2008ರ ವಿಧಾನಸಭೆಗೆ ಚುನಾಯಿತರಾದ 215 ಶಾಸಕರು ಇತ್ತಿರುವ ಆಸ್ತಿವಿವರದ ಮಾಹಿತಿ ವಿಶ್ಲೇಷಣೆಯಂತೆ 131 ಶಾಸಕರು ಅಥವಾ ಶೇ. 61 ಶಾಸಕರು ಕೋಟ್ಯಾಧಿಪತಿಗಳು

- ವಿಜಯನಗರ ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾಗಿರುವ ಬಿಜೆಪಿ ಪಕ್ಷದ **ಆನಂದ್ ಸಿಂಗ್** ಅವರು ಘೋಷಿಸಿಕೊಂಡಿರುವಂತೆ ಮಂತ್ರಿ ಮಂಡಲದ ಎಲ್ಲ ಸಚಿವರಿಗಿಂತ ಅವರ ಆಸ್ತಿ ಅತಿ ಹೆಚ್ಚು (ರೂ. 88.66 ಕೋಟಿಗಳು). ಅವರ ನಂತರ, 2010ರಲ್ಲಿ ಆಯ್ಕೆಯಾದ ಬಿಜೆಪಿಯಿಂದ ಶಾಸಕ **ವಿ. ಸೋಮಣ್ಣ** ರೂ. 10.99 ಕೋಟಿಗಳ ಆಸ್ತಿಯ ಮೂಲಕ ಎರಡನೇ ಸ್ಥಾನದಲ್ಲಿದ್ದಾರೆ. ನಂತರ ಕಾರವಾರ ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾಗಿರುವ ಬಿಜೆಪಿಯ **ಆಸ್ನೋಟಿಕರ್ ಆನಂದ್ ವಸಂತ್** ರವರು ಒಟ್ಟು ಆಸ್ತಿ ರೂ. 10.39 ಕೋಟಿಗಳಿಂದ ಮೂರನೆಯವರಾಗಿದ್ದಾರೆ.

- **2008ರ ಕರ್ನಾಟಕ ವಿಧಾನ ಸಭೆಯಲ್ಲಿನ ಮಂತ್ರಿಗಳ ಸರಾಸರಿ ಆಸ್ತಿ ರೂ. 6.96 ಕೊಟಿ.**
- ಆಸ್ತಿ ವಿಶ್ಲೇಷಿಸಲಾಗಿರುವ 24 ಸಚಿವರಲ್ಲಿ ಒಟ್ಟು 14 ಸಚಿವರು 2004 ವಿಧಾನ ಸಭೆಯ ಅವಧಿಯಲ್ಲೂ ಸಚಿವರಾಗಿದ್ದು, ಆಗ ಅವರ ಸರಾಸರಿ ಆಸ್ತಿ ರೂ. 91 ಲಕ್ಷವಾಗಿತ್ತು.

- **2004ರಿಂದ 2008ರ ಅವಧಿಯಲ್ಲಿ ಪ್ರತಿ ಸಚಿವರ ಸರಾಸರಿ ಆಸ್ತಿ ಶೇ. 665ರಷ್ಟು ಹೆಚ್ಚಾಗಿದೆ.**

- 2008ರ ವಿಧಾನ ಸಭೆಯ ಒಟ್ಟು 224 ಶಾಸಕರ ಘೋಷಿತ ಆಸ್ತಿಯಲ್ಲಿ 214 ಶಾಸಕರ ಘೋಷಿತ ಆಸ್ತಿ ವಿವರಗಳನ್ನು ವಿಶ್ಲೇಷಿಸಿದಾಗ ಕಂಡುಬರುವುದು ಅವರ ಸರಾಸರಿ ಆಸ್ತಿ ರೂ. 5.98 ಕೋಟಿಗಳು (ಇದರಲ್ಲಿ ಗೋವಿಂದರಾಜ ನಗರದಿಂದ ಚುನಾಯಿತರಾಗಿರುವ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ **ಪ್ರಿಯಾ ಕೃಷ್ಣ** ಅವರ ಆಸ್ತಿ ವಿವರ ನಂಬಲರ್ಹವಾಗದ ಕಾರಣ ಅದನ್ನು ಪರಿಗಣಿಸಲಾಗಿಲ್ಲ). ಕರ್ನಾಟಕ ವಿಧಾನ ಸಭೆಗೆ 2004ರಲ್ಲಿ ನಡೆದ ಚುನಾವಣೆಯ ಸಂದರ್ಭದಲ್ಲಿ ಒಟ್ಟು 224 ಶಾಸಕರಲ್ಲಿ 214 ಶಾಸಕರ ವಿವರಗಳನ್ನು ವಿಶ್ಲೇಷಿಸಿದ್ದಾಗ ಕಂಡುಬಂದದ್ದು ಅವರ ಸರಾಸರಿ ಘೋಷಿತ ಆಸ್ತಿ ರೂ. 1.29 ಕೋಟಿ ಆಗಿತ್ತು.

- **ವಿಧಾನ ಸಭೆಗೆ ನಡೆದ 2004ರ ಚುನಾವಣಾ ಅವಧಿಯಿಂದ 2008ರ ಚುನಾವಣೆಯೊಳಗೆ ಶಾಸಕರ ಘೋಷಿತ ಆಸ್ತಿಯ ಸರಾಸರಿ ಶೇ. 364ರಷ್ಟು ಏರಿದೆ.**

- 2008ರಲ್ಲಿ ಚುನಾಯಿತರಾದ ಶಾಸಕರ ಘೋಷಿತ ಆಸ್ತಿಯ ಸರಾಸರಿಯನ್ನು ಪಕ್ಷವಾರು ವಿಂಗಡಿಸಿ ನೋಡಿದಾಗ ಈ ಮುಂದಿನಂತೆ ಕಾಣುತ್ತದೆ: ಭಾರತ ರಾಷ್ಟ್ರೀಯ ಕಾಂಗ್ರೆಸ್ (70 ಶಾಸಕರ ಘೋಷಿತ ಆಸ್ತಿಯ ವಿಶ್ಲೇಷಣೆ) ಸರಾಸರಿ ರೂ. 9.55 ಕೋಟಿ; ಜನತಾ ದಳ (ಎಸ್) (26 ಶಾಸಕರ ಘೋಷಿತ ಆಸ್ತಿಯ ವಿಶ್ಲೇಷಣೆ) ಸರಾಸರಿ ರೂ. 4.43 ಕೋಟಿ; ಬಿಜೆಪಿ (112 ಶಾಸಕರ ಘೋಷಿತ ಆಸ್ತಿಯ ವಿಶ್ಲೇಷಣೆ) ಸರಾಸರಿ ರೂ. 4.35 ಕೋಟಿ ಮತ್ತು ಸ್ವತಂತ್ರ ಶಾಸಕರು (6 ಶಾಸಕರ ಘೋಷಿತ ಆಸ್ತಿಯ ವಿಶ್ಲೇಷಣೆ) ಸರಾಸರಿ ರೂ. 1.49 ಕೋಟಿ.

- 2004ರಲ್ಲಿ ಚುನಾಯಿತರಾದ ಶಾಸಕರ ಘೋಷಿತ ಆಸ್ತಿಯ ಸರಾಸರಿ, ಪಕ್ಷವಾರು ಈ ಮುಂದಿನಂತಿತ್ತು: ಭಾರತ ರಾಷ್ಟ್ರೀಯ ಕಾಂಗ್ರೆಸ್ (58 ಶಾಸಕರ ಘೋಷಿತ ಆಸ್ತಿಯ ವಿಶ್ಲೇಷಣೆ) ಸರಾಸರಿ 2.30 ಕೊಟಿ; ಜನತಾದಳ (ಎಸ್) (52 ಶಾಸಕರ ಘೋಷಿತ ಆಸ್ತಿಯ ವಿಶ್ಲೇಷಣೆ) ಸರಾಸರಿ ರೂ. 96.30 ಲಕ್ಷ.

- ದಕ್ಷಿಣದ ನಾಲ್ಕು ರಾಜ್ಯಗಳಲ್ಲಿ ಇತ್ತೀಚೆಗೆ ನಡೆದ ಚುನಾವಣಾ ಸಂದರ್ಭದಲ್ಲಿ ಚುನಾಯಿತ ಶಾಸಕರು ಘೋಷಿಸಿಕೊಂಡಿರುವ ಆಸ್ತಿಯ ವಿಶ್ಲೇಷಣೆ ಮತ್ತು ಶಾಸಕರ ಸರಾಸರಿ ಆಸ್ತಿ ವಿವರದಂತೆ 2008ರ ಕರ್ನಾಟಕ ವಿಧಾನ ಸಭೆ ಚುನಾವಣೆಯಲ್ಲಿ ಆಯ್ಕೆಯಾದ ಶಾಸಕರು ಅತ್ಯಂತ ಹೆಚ್ಚಿನ ಸರಾಸರಿ ಆಸ್ತಿ ಹೊಂದಿದ್ದಾರೆ: ರೂ. 5.98 ಕೋಟಿಗಳು. ಎರಡನೆಯ ಸ್ಥಾನ 20011ರಲ್ಲಿ ಚುನಾಯಿತರಾದ ತಮಿಳುನಾಡಿನ ವಿಧಾನ ಸಭೆಯ ಶಾಸಕರು: ಸರಾಸರಿ ರೂ. 3.98 ಕೋಟಿ; ಮೂರನೆಯ ಸ್ಥಾನ 2009ರಲ್ಲಿ ಚುನಾಯಿತರಾದ ಆಂಧ್ರಪ್ರದೇಶದ ವಿಧಾನ ಸಭೆಯ ಶಾಸಕರು: ಸರಾಸರಿ ರೂ. 3.78 ಕೋಟಿ ಮತ್ತು ಕೊನೆಯದಾಗಿ 2011ರಲ್ಲಿ ಚುನಾಯಿತರಾದ ಕೇರಳ ವಿಧಾನ ಸಭೆಯ ಶಾಸಕರು: ಸರಾಸರಿ ರೂ. 1.43 ಕೋಟಿಗಳು.

- ಕರ್ನಾಟಕ ವಿಧಾನ ಸಭೆಯ ಸ್ವತಂತ್ರ ಚುನಾಯಿತ ಶಾಸಕರು ಮತ್ತು ಕರ್ನಾಟಕ ಮಂತ್ರಿಮಂಡಲದ ಸದಸ್ಯರಾದ **ಆರ್.ವರ್ತೂರ ಪ್ರಕಾಶ್** ಅವರು ತಮ್ಮ ಘೋಷಿತ ಆಸ್ತಿ ರೂ. 2 ಲಕ್ಷದೊಡನೆ ಕೊನೆಯ ಸ್ಥಾನದಲ್ಲಿದ್ದಾರೆ.

- ವಿಶ್ಲೇಷಣೆಗೆ ಒಳಪಟ್ಟಂತಹ 24 ಸಚಿವರಲ್ಲಿ ಒಬ್ಬರೂ ಮಹಿಳೆಯರಿಲ್ಲ.

## ಹಿನ್ನೆಲೆ

ಪ್ರಜಾಸತ್ತೀಯ ಸುಧಾರಣೆಗಾಗಿ ಸಂಘಟನೆ [Association for Democratic Reforms (ADR)] ಮತ್ತು ರಾಷ್ಟ್ರೀಯ ಚುನಾವಣಾ ಕಾವಲು [National Election Watch (NEW)] ರಾಷ್ಟ್ರೀಯ ಮಟ್ಟದಲ್ಲಿ 1200ಕ್ಕೂ ಹೆಚ್ಚು ನಾಗರೀಕರೇ ಮುಂಚೂಣಿಯಲ್ಲಿರುವ ಸಂಘಟನೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳನ್ನು ಹೊಂದಿರುವ ಒಕ್ಕೂಟವಾಗಿದ್ದು, ಭಾರತದಲ್ಲಿ ಚುನಾವಣಾ ಸುಧಾರಣೆ, ಪ್ರಜಾಸತ್ತೀಯ ಸುಧಾರಣೆ ಮತ್ತು ಆಡಳಿತವನ್ನು ಉತ್ತಮಪಡಿಸುವ ಉದ್ದೇಶಕ್ಕಾಗಿ ದುಡಿಯುತ್ತಿದೆ. ರಾಷ್ಟ್ರೀಯ ಚುನಾವಣಾ ಕಾವಲು ಕರ್ನಾಟಕದ ಸಚಿವ ಸಂಪುಟದ 27 ಸಚಿವರಲ್ಲಿ 24 ಸಚಿವರ ಘೋಷಿತ ಆಸ್ತಿ ಮತ್ತಿತರ ವಿವರಗಳನ್ನು ವಿಶ್ಲೇಷಿಸಿದೆ.

ಈ ವರದಿಯನ್ನು ಚುನಾವಣಾ ಸಮಯದಲ್ಲಿ ಅಭ್ಯರ್ಥಿಗಳು ನೀಡಿರುವ ಸ್ವಯಂಘೋಷಣಾ ಪ್ರಮಾಣಪತ್ರದಲ್ಲಿರುವ ಮಾಹಿತಿಯ ವಿಶ್ಲೇಷಣೆಯನ್ನು ಆಧರಿಸಿ ತಯಾರಿಸಲಾಗಿದೆ. ಈ ಮುಂದಿನ ಪುಟಗಳಲ್ಲಿ ಸಚಿವ ಸಂಪುಟದ ಮಂತ್ರಿಗಳ ಮೇಲಿರುವ ಅಪರಾಧಿಕ ಕೃತ್ಯಗಳ ಮೊಕದ್ದಮ್ಮೆಗಳು, ಆಸ್ತಿ/ಹಣಕಾಸು ಮತ್ತು ಇತರ ಹಿನ್ನೆಲೆಗಳ ವಿಶ್ಲೇಷಣೆಯಿದೆ.

## ಮಂತ್ರಿಗಳು ಘೋಷಿಸಿಕೊಂಡಿರುವಂತೆ ಅವರ ಮೇಲಿರುವ ಆಪರಾಧಿಕ ಕೃತ್ಯಗಳ ಪ್ರಕರಣಗಳ ವಿಶ್ಲೇಷಣೆ

- ವಿಧಾನ ಸಭೆಗೆ 2008ರಲ್ಲಿ ನಡೆದ ಚುನಾವಣಾ ಸಂದರ್ಭದಲ್ಲಿ ನೀಡಿರುವ ಸ್ವಯಂಘೋಷಣಾ ಪ್ರಮಾಣಪತ್ರದಲ್ಲಿ ಉಲ್ಲೇಖಿಸಿರುವಂತೆ ಶೇ.42 ಸಚಿವರ ಮೇಲೆ (ವಿಶ್ಲೇಷಿಸಲಾದ 24ರಲ್ಲಿ 10) ಅಪರಾಧಿಕ ಮೊಕದ್ದಮ್ಮೆಗಳು ಇವೆ.

- 24ರಲ್ಲಿ ಇಬ್ಬರು ಸಚಿವರ ಮೇಲೆ ಭಾರತ ದಂಡ ಸಂಹಿತೆ (IPC)ಯಲ್ಲಿ ಉಲ್ಲೇಖಿಸಲಾಗಿರುವ ಕೊಲೆ, ಕೊಲೆ ಯತ್ನ, ಅಪಹರಣ, ಕಳ್ಳತನವೇ ಮೊದಲಾದ ಗುರುತರ ಆಪಾದನೆಗಳು ಇವೆ.

- ತಮ್ಮ ಮೇಲೆ ಅಪರಾಧಿಕ ಮೊಕದ್ದಮ್ಮೆಗಳಿವೆ ಎಂದು ಘೋಷಿಸಿಕೊಂಡಿರುವ ಈ ಹತ್ತು ಸಚಿವರಲ್ಲಿ ಈ ಮುಂದಿನ ಸಚಿವರು ತಮ್ಮ ಮೇಲೆ ತೀವ್ರತರವಾದ ಆಪಾದಮೆಗಳಿವೆ ಎಂದು ದಾಖಲಿಸಿದ್ದಾರೆ: 1) **ಬಾಲಚಂದ್ರ ಲಕ್ಷ್ಮಣರಾವ್ ಜಾರಖಿಹೊಳಿ** (ಅರಭಾವಿಯ ಬಿಜೆಪಿ ಶಾಸಕರು) ತಮ್ಮ ಮೇಲೆ ಕೊಲೆ, ಕೊಲೆ ಯತ್ನ, ಅಪಹರಣ, ಕಳ್ಳತನ ಮೊದಲಾದವುಗಳನ್ನು ಕುರಿತು ಒಂದು ಪ್ರಕರಣವಿದೆ ಎಂದು ಘೋಷಿಸಿಕೊಂಡಿದ್ದಾರೆ; 2) **ಸಿ.ಟಿ. ರವಿ** (ಚಿಕ್ಕಮಗಳೂರಿನ ಬಿಜೆಪಿ ಶಾಸಕರು) ತಮ್ಮ ಮೇಲೆ ವಿವಿಧ ಗುಂಪುಗಳ ನಡುವೆ ಧರ್ಮ, ಜನಾಂಗ, ವಾಸಸ್ಥಳ, ಭಾಷೆ ಮೊದಲಾದವುಗಳನ್ನು ಕುರಿತು ದ್ವೇಷ ಉಂಟು ಮಾಡಿರುವ ಕುರಿತು ಪ್ರಕರಣ ಇದೆಯೆಂದು ಘೋಷಿಸಿಕೊಂಡಿದ್ದಾರೆ.